REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 24th june instead of 20th or 21st



# ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

## ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website : www.karnatakaaryavysyamahasabha.com E-mail : kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 35 ಜೂನ್ 2022 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 6

ಅಧ್ಯಕ್ಷರ ನುಡಿ

## ಅನುಮಾನವೇಃ... ನೀ ನನ್ನೇಕೆ ಸುಡುವೇಃ



**ಮ**ನುಷ್ಯನ ಬೆಳವಣಿಗೆ ಹೇಗೆ ಆಗಿದೆ ಎನ್ನುವುದನ್ನು ಅವನ ಮಾತು ತೋರಿಸುತ್ತದೆ. ಮನುಷ್ಯ ಎಂಥಹವನು ಎನ್ನುವುದು ಅವನು ತೊಟ್ಟ ಬಟ್ಟೆಯಿಂದ ಗೊತ್ತಾಗುವುದಿಲ್ಲ. ಅವನು ಆಡುವ ಮಾತು, ನಡೆದುಕೊಳ್ಳುವ ರೀತಿ, ನೀತಿಗಳು ವ್ಯಕ್ತಿಯ ವ್ಯಕ್ತಿತ್ವವನ್ನು ತೋರಿಸಿಕೊಡುತ್ತದೆ. ಮನುಷ್ಯನ ಜೀವನದಲ್ಲಿ ನೀತಿ ಎನ್ನುವುದು ಬೇರೇನೂ ಅಲ್ಲ, ಅಂತರಾತ್ಮದ ಧ್ವನಿಯನ್ನು ಅನುಸರಿಸಿ ನಡೆಯುವುದೇ ನೀತಿ ಎನಿಸಿದೆ. ಸಹಜ ಸ್ಥಿತಿಯಲ್ಲಿರುವ ಆರೋಗ್ಯ ಪೂರ್ಣವಾದ ಮನಸ್ಸು, ಜೀವನದಲ್ಲಿ ಎಂದಿಗೂ ಅಸಹಜ ಸ್ಥಿತಿಯನ್ನು ಅನಾರೋಗ್ಯಕರ ಸ್ಥಿತಿಯ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬಾರದು. ನೀತಿಯುಕ್ತ ಜೀವನವನ್ನು ನಡೆಸದೇ ಹೋದಲ್ಲಿ ನಾವು ಜೀವನದಲ್ಲಿ ಏನನ್ನೂ ಸಾಧಿಸಲು ಸಾಧ್ಯವೇ ಇಲ್ಲ. ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸುಸ್ಥಿತಿಯಲ್ಲಿಡದ ಹೊರತು ನಮ್ಮ ಜೀವನ ಎಂದಿಗೂ ಸರಿಯಾಗದು. **ಜೀವನ ಎಂದರೆ ನಾವು ಪರಿಸ್ಥಿತಿಯೊಡನೆ ಮಾಡಿಕೊಂಡ ಒಪ್ಪಂದ. ಜೀವನ ಭಾವನೆಗಳ ಸರಮಾಲೆ.** ನಮ್ಮ ಭಾವನೆಗಳು ಶುದ್ಧವಾಗಿದ್ದರೆ ಮಾತ್ರ, ಪರಿಶುದ್ಧ ಜೀವನ ನಮ್ಮದಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಕೊರತೆ ಇರುವುದೇ ಭಾವನೆಗಲ್ಲಿ. ಆದರೆ ಭಾವನಾಯುಕ್ತ ಮನಸ್ಸುಗಳನ್ನು ಹುಡುಕಬೇಕಾಗಿದೆ, ಆ ಭಾವನೆಗಳೂ ಕಲಬೆರಕೆಯಾಗಿದೆ, **ಹೃದಯಕ್ಕೆ ಹತ್ತಿರವಾಗಬೇಕಿದ್ದ ಭಾವನೆಗಳು ಇಂದು ಸ್ವಾರ್ಥದಿಂದ ತುಂಬಿ ಹೋಗಿದೆ, ಭಾವನೆಗಳಲ್ಲಿನ ಮೌಲ್ಯ ಕುಸಿದಿದೆ.** ಹಾಗಾಗಿ ಮನೆಮನೆಗಳಲ್ಲಿ ಸಿರಿವಂತಿಕೆ ಇದ್ದರೂ, ದೊಡ್ಡ ದೊಡ್ಡ ವಿದ್ಯಾವಂತರಿದ್ದರೂ ಅಶಾಂತಿ, ಅಸಮಾಧಾನಗಳು ತಾಂಡವವಾಡುತ್ತಿವೆ, ನಮ್ಮ ಸಂಬಂಧಗಳನ್ನು ಸುಧಾರಿಸಿ ಉಳಿಸಿ, ಬೆಳೆಸಿ ಕೊಳ್ಳಲು ಮೊದಲು ನಾವು ಕ್ಷಮಿಸುವುದನ್ನು ಕಲಿಯಬೇಕು. ಇನ್ನೊಬ್ಬರ ತಪ್ಪಿನ ಪ್ರಮಾಣದ ಬಗ್ಗೆ ಲೆಕ್ಕಹಾಕಬಾರದು. ಒಂದು ವೇಳೆ ತಪ್ಪಾಗಿದ್ದರೆ ಯಾವ ಕಾರಣದಿಂದ ತಪ್ಪಾಗಿದೆ ಎಂಬುದರ ಮೂಲವನ್ನು ಹುಡುಕಿ ತಪ್ಪನ್ನು ಸರಿಪಡಿಸಬೇಕು, ಆದರೆ, ಇಂದಿನ ಪರಿಸ್ಥಿತಿಯೇ ಬೇರೆ ಆಗಿದೆ, ತಪ್ಪಾಗಿರಬಹುದು ಎಂದು ತಿಳಿದ ಕೂಡಲೇ ನಮ್ಮ ಮನಸ್ಸಿನಲ್ಲಿ **ಅನುಮಾನ** ಎಂಬ ರಕ್ಕಸನಿಗೆ ಸ್ವಾಗತ ನೀಡುತ್ತೇವೆ. **ಅನುಮಾನ** ಎಂಬ ದೊಡ್ಡ ರೋಗ ಭೂಮಿಯ ಹುಟ್ಟಿನೊಂದಿಗೆ ಧರೆಯಲ್ಲಿ ಸ್ಥಾನ ಪಡೆದಿದೆ. ನಮ್ಮಲ್ಲಿ ಹುಟ್ಟುವ **ಅನುಮಾನಗಳು** ನಮ್ಮ ಎಷ್ಟೋ ಸಂಬಂದಗಳನ್ನು ಹಾಳುಮಾಡಿದೆ. **ಅನುಮಾನಗಳು** ನಮ್ಮಲಿರುವ ವ್ಯಕ್ತಿತ್ವಗಳನ್ನು ನಾಶ ಮಾಡಿದೆ. **ಅನುಮಾನ** ನಮ್ಮ ಕುಟುಂಬದ ಗೌರವಗಳನ್ನು ಬೀದಿಗೆ ತರುತ್ತದೆ, **ಅನುಮಾನ** ಎಂಬುದು ಒಡಹುಟ್ಟಿದವರೊಂದಿಗೆ ಭಿನ್ನಾಭಿಪ್ರಾಯಗಳನ್ನು ಮೂಡಿಸಿ ಮನೆ ಮುರಿದಿದೆ. ದಾಂಪತ್ಯ ಜೀವನ ಹಳಸಿ ಹೋಗುತ್ತಿದೆ ಅಂದರೆ ಅನುಮಾನ ಎಂಬ ವ್ಯಾದಿ ಘೋರವಾದದ್ದು ಎಂದು ತಿಳಿದಿದ್ದರೂ, ನಮಗೇ ತಿಳಿಯದಂತೆ ಅನುಮಾನದ ದಾಸರಾಗಿಬಿಡುತ್ತೇವೆ.

**ವಿಶ್ವದಲ್ಲಿ ಸೂರ್ಯನ ಬೆಳಕಿಗೆ ಸರಿಸಮಾನವಾದ ಬೆಳಕು ನೀಡುವ ಶಕ್ತಿಯನ್ನು ವಿಜ್ಞಾನ ಅವಿಷ್ಕಾರ ಮಾಡಿದೆ,** ಮಾರಣಾಂತಿಕ ಕಾಯಿಲೆಗಳಿಗೂ ವಿಜ್ಞಾನ ಸಡ್ಡು ಹೊಡೆದು ಔಷದಿಗಳನ್ನು ನೀಡಿದೆ. ಯಾವುದೋ ಉದಾಹರಣೆ ಏಕೆ ಇತ್ತೀಚೆಗಷ್ಟೇ ವಿಶ್ವವನ್ನೇ ತಲ್ಲಣಗೊಳಿಸಿದ ಕೋವಿಡ್19 ಕ್ಕೆ ಕೇವಲ 6–8 ತಿಂಗಳಲ್ಲಿ ಔಷದಿ ಕಂಡು ಹಿಡಿದು ಕೋಟ್ಯಾನು ಕೋಟಿ ಜೀವಗಳನ್ನು ಉಳಿಸಿದ ಕೀರ್ತಿ ವಿಜ್ಞಾನಿಗಳಿಗೆ ಇದೆ. ಆದರೂ... **ಅನುಮಾನ ಎಂಬ ರೋಗಕ್ಕೆ ಇಂದಿಗೂ ಔಷದಿ ಇಲ್ಲ ಅಂತ್ಯವೂ ಆಗಿಲ್ಲ.** ಅನುಮಾನಯುಕ್ತ ಮನಸ್ಸುಗಳು ಕಂಗಾಲಾಗಿದೆ, ಅನುಮನಗಳು ನಾವು ತಿನ್ನುವ ಅನ್ನವನ್ನು ವಿಷಗೊಳಿಸಿದೆ, **ಅನುಮಾನದ ಕದಂಬ ಬಾಹುಗಳಿಗೆ ಕುಟುಂಬಗಳು ನಲುಗಿ ಹೋಗಿದೆ,** ಬಂದುಗಳೇ, ಏಳಿ ಎದ್ದೇಳಿ ಅನುಮಾನ ಮುಕ್ತರಾಗಿ ನೆಮ್ಮದಿಯ ಜೀವನ ನಿಮ್ಮದಾಗುತ್ತದೆ. ಬಂಧುಗಳೇ, **ಅನುಮಾನಂ ಪೆದ್ದ ರೋಗಂ** ಎಂಬ ಗಾದೆ ತಿಳಿದಿದ್ದರೂ, ಅನುಮಾನಗಳಿಂದಲೇ ನಮಗೆ ತಿಳಿದ ಹತ್ತು ಹಲವು ವ್ಯಕ್ತಿಗಳು /ಕುಟುಂಬಗಳು ನಾಶವಾಗಿದೆ, ಬೀದಿ ಪಾಲಾಗಿದೆ ಎಂದು ತಿಳಿದಿದ್ದರೂ ಅನುಮಾನಿಸುವುದನ್ನು ನಾವು ಬಿಡಲು ಸಾದ್ಯವಾಗಿಲ್ಲ ಅಲ್ಲವೇ? **ಅನುಮಾನ ನಮ್ಮನ್ನು ಸೇರುವಾಗ ಸಕ್ಕರೆಯಂತೆ, ಅನುಮಾನದಲ್ಲಿನ ಒದ್ದಾಟ ಬಬಲ್‌ಗಮ್ ನಂತೆ, ಮತ್ತುಷ್ಟು ಉರಿಯಲು ಬಿಟ್ಟರೆ ನಮ್ಮ ಜೀವನ ಉರಿದು ಕರಕಲಾಗುತ್ತದೆ.**

ನಮ್ಮ ಮನಸ್ಸಿನಲ್ಲಿ ಅನುಮಾನ ಎಂಬ ವಿಷಾಂಕುರ ಆದ ಕೂಡಲೇ ನಾವು ಎಚ್ಚೆತ್ತು ಕೊಳ್ಳದಿದ್ದರೆ **ಅನುಮಾನದ ಬೇರುಗಳು ನಮ್ಮನ್ನು ಆವರಿಸಿಕೊಂಡು ನಮ್ಮ ಮನಸ್ಸಿನ ನಿಯಂತ್ರಣವನ್ನು ತನ್ನ ತೆಕ್ಕೆಗೆ ತೆಗೆದು ಕೊಳ್ಳುತ್ತದೆ,** ಅಷ್ಟಾದರೆ ಸಾಕು ಮನಸ್ಸುಗಳು ನಿರ್ನಾಮವಾಗಿ ಕುಟುಂಬಗಳು ಬೀದಿ ಪಾಲಾಗಲು. ಇದರಿಂದ ಅನರ್ಥಗಳಾಗುತ್ತದೆ ಎಂದು ತಿಳಿದಿದ್ದರೂ ಸಹ ನಾವು ಅನುಮಾನವನ್ನು ಹೊತ್ತು ತಿರುಗುತ್ತೇವೆ. ಅನುಮಾನಗಳ ದಾಸರಾದ ನಂತರ ಅವು ಓಡಾಡುವುದೇ ಹೆದ್ದಾರಿಗಳಲ್ಲಿ. ತಾನು ನೋಡಿದ್ದು, ತಾನು ತಿಳಿದಿದ್ದು ತಾನು ಕೇಳಿದ್ದೇ ಸರಿ ಎಂಬ ವಾದ. ಅದೂ ಮಕ್ಕಳೊಂದಿಗಿರಲಿ, ಪೋಷಕರೊಂದಿಗಿರಲಿ, ದಂಪತಿಗಳ ನಡುವೆ ಆಗಿರಲಿ, ವಾದ ವಿವಾದಗಳಾಗಿ, ನಿತ್ಯ ನರಕವಾಗಿ, ಹೇಳಲೂ ಆಗದೆ ತೋರ್ಪಡಿಸಲೂ ಸಾದ್ಯವಾಗದೆ ನಾಟಕೀಯವಾಗಿ ಜೀವನ ನಡೆಸುತ್ತಾ **ಮನದ ಅಂತರಂಗದಲ್ಲಿ ವಿಷದ ಕಲ್ಯಾಣಿಯನ್ನೇ ನಿರ್ಮಾಣ ಮಾಡಿಕೊಂಡು ಅದನ್ನೇ ಅಮೃತವೆಂದು ದಿನ ದಿನವೂ ಸೇವಿಸುತ್ತಾ ಸಂಸಾರಗಳಲ್ಲಿ ಭಿನ್ನತೆ, ಖಿನ್ನತೆ, ಒಡಕು** ಇತ್ಯಾದಿ ರೋಗಗಳಿಗೆ ಆಮಂತ್ರಣ ನೀಡುತ್ತಿದ್ದೇವೆ.

ಇತ್ತೀಚಿನ ವರ್ಷಗಳಲ್ಲಿ ಅನುಮಾನ ಎಂಬುದು ತನ್ನ ಎಲ್ಲೆಯನ್ನು ಮೀರಿ ಪರಾಕಾಷ್ಠೆಗೆ ತಲುಪುತ್ತಿದೆ. ತಮ್ಮ ಅನುಮಾನಗಳ ಪರಿಹಾರಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಮುಂದಾಗಿದ್ದಾರೆ. ಅಷ್ಟೇ ಏಕೆ ಅನುಮಾನಿತರ ಡೈರಿ, ಮೊಬೈಲ್ ಫೋನ್, ಈ ಮೇಲ್, ಗಳನ್ನು ಸಹ ಕದ್ದು ಮುಚ್ಚಿ ನೋಡಿ ಮಾಹಿತಿ ಸಂಗ್ರಹಿಸುವ ಹುಚ್ಚಾಟಕೆ ಮುಂದಾಗಿದ್ದಾರೆ. ಇನ್ನೂ ಕೆಲವರಂತೂ ತಂತ್ರಜ್ಞಾನವನ್ನು ಬಳಸಿಕೊಂಡು ಅನುಮಾನಿತರ ಮೊಬೈಲ್ ಪೋನ್‌ಗಳಿಗೆ ಬರುವ ಮೆಸೇಜ್‌ಗಳನ್ನು ಹ್ಯಾಕ್ ಮಾಡಿದ್ದಾರೆ. ಇಂತಹ ಕೃತ್ಯಗಳಿಂದ ಹಲವಾರು ಭಾರಿ ಕುಟುಂಬದ ಸದಸ್ಯರಲ್ಲಿ, ಆತ್ಮೀಯ ಸ್ನೇಹಿತರಲ್ಲಿ ವ್ಯಾಪಾರ ವ್ಯವಹಾರಗಳಿಲ್ಲಿ ಬೃಹತ್ ಒಡಕು ಉಂಟಾಗಿರುವುದಲ್ಲದೆ ಹಲವು ರೀತಿಯ ಗಲಾಟೆಗಳಿಗೂ ಕಾರಣವಾಗಿ ಕೆಲವಾರು ಭಾರಿ ಇದೇ ಅನುಮಾನಗಳು ಅನುಮಾನಿತರ ಮೇಲೆ ಸೇಡು ತೀರಿಸಿಕೊಳ್ಳಲು ಸುಫಾರಿ ಕೊಟ್ಟಿರುವುದನ್ನು ಸಹ ನಾವು ಕೇಳಿದ್ದೇವೆ. ಅನುಮಾನ ಎಂಬುದು ಗಂಡ–ಹೆಂಡತಿ, ಅಣ್ಣ–ತಮ್ಮಂದಿರಲ್ಲಿ ಬಂದಿದ್ದೇ ಆದಲ್ಲಿ ಸಂಬಂಧಗಳು ಅರ್ಥವನ್ನೇ ಕಳೆದುಕೊಳ್ಳುತ್ತವೆ. ಪರಸ್ಪರ ವಿಶ್ವಾಸ ನಂಬಿಕೆಗಳು ಕೊಚ್ಚಿ ಹೇಗಿವೆ. **ಭಾವನೆಗಳನ್ನು ಹಂಚಿಕೊಂಡು ಪ್ರೀತಿ ವಿಶ್ವಾಸದಿಂದ ಜೀವಿಸಬೇಕಾದ ದಂಪತಿಗಳು ಕೇವಲ ದೇಹಗಳೊಂದಿಗೆ ಜೀವನ ನಡೆಸುತ್ತಿದ್ದಾರೆ.** ಬಂಧುಗಳೇ, ನಿರ್ಮಲವಾದ ಮನಸ್ಸು – ಭಾಂದವ್ಯಗಳೊಂದಿಗೆ ನಾವು ಇದ್ದರೆ ಅನುಮಾನ ನಮ್ಮ ಬಳಿ ಸುಳಿಯುವುದೇ ಇಲ್ಲ. ಕೆಲವು ವ್ಯಕ್ತಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಈರ್ಷೆಯಿಂದ ಇಬ್ಬರ ನಡುವೆ ಅನುಮಾನವೆಂಬ ವಿಷಬೀಜವನ್ನು ಬಿತ್ತಿ ಇತರರ ಜೀವನದ ಸಂತೋಷವನ್ನು ಹಾಳುಮಾಡಿ ಬಿಡುತ್ತಾರೆ ಅಂತಹವರಿಗೇನೂ ಲಾಭವಿಲ್ಲ ಆದರೆ ಹಿತಶತೃಗಳ ಮಾತು ನಂಬಿ ನಾವು ಕಳೆದುಕೊಳ್ಳುವುದು ಮಾತ್ರ ಅಪಾರ

ಬಂಧುಗಳೇ, **ಜನನ ಮರಣಗಳ ನಡುವೆ ಇರುವ ಈ ಅನಿಶ್ಚಿತೆಯ ಬದುಕು ಮೋರಿ ನೀರಿನ ಭಾಗವಾಗದೆ, ಸಾವಿರಾರು ಕಿಮೀ ಹರಿಯುವ ಪವಿತ್ರಗಂಗಾ ನದಿಯ ಕಾಲುವೆಯ ಬಿಂದುಗಳಾಗಿ ಪ್ರಕೃತಿಯ ಹಸಿರನ್ನು ಹೆಚ್ಚಿಸಿ, ಬದುಕಲು ಆರೋಗ್ಯವಾದ ಉಸಿರನ್ನು ನೀಡಿ, ಸಾರ್ಥಕತೆಯನ್ನು ಮೆರೆಯಬೇಕಿದೆ,** ಇಷ್ಟೇ ಅಲ್ಲ ನಮ್ಮ ಬದುಕನ್ನು ಅರ್ಥ ಮಾಡಿಕೊಂಡು ಸಂಬಂಧಗಳನ್ನು ವೃದ್ಧಿಸಿಕೊಳ್ಳಬೇಕು. ಯಾರ ಮೇಲೆ ನಮಗೆ ಬೇಸರ–ಅನುಮಾನ ಇತ್ಯಾದಿಗಳಿವೆಯೋ ಅಂತಹವರ ಹೃದಯ ಗೆದ್ದು, ಸ್ನೇಹವನ್ನು ಗಳಿಸಿ ಅವರನ್ನು ನಮ್ಮೊಂದಿಗೆ ಸೆಳೆದರೆ ಅಲ್ಲಿಗೆ ಸಮಸ್ಯೆಗೆ ಪರಿಹಾರ – ಕಂಡುಕೊಂಡರೇ ಅಲ್ಲವೇ?

**ಬದುಕು ಜಟಕಾ ಬಂಡಿ.ವಿಧಿಯದರ ಸಾಹೇಬ।**
**ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು॥**
**ಮದುವೆಗೋ ಮಸಣಕ್ಕೋ ಹೋಗೆಂದ ಕಡೆಗೋಡು।**
**ಪದಕುಸಿಯೇ ನೆಲವಿಹುದು – ಮಂಕುತಿಮ್ಮ॥**

ವಿಧಿ ಆಟ ಮುಗಿಯುವ ಮೊದಲೇ **ಜನ್ಮ ಭೂಮಿಯ ಋಣವನ್ನು ತೀರಿಸಬೇಕು. ನಮ್ಮೆಲ್ಲರ ಪ್ರೀತಿ ಪ್ರೇಮ, ವಿಶ್ವಾಸಗಳು ಅಕ್ಷಯವಾಗಿ ಪರಸ್ಪರ ಹಂಚಿಕೊಂಡು ಅನುಮಾನವೆಂಬ ರೋಗದಿಂದ ಮುಕ್ತರಾಗಿ, ನಮ್ಮ ಮನಸ್ಸುಗಳನ್ನು ನಿಗ್ರಹಿಸಿ,** ಇತರರ ಮನಸ್ಸಿಗೆ ಸಂತಸ ನೀಡಿ, ಸಂಘ ಜೀವಿಗಳಾಗಿ, ಸಮಾಜದ ಭಾಗವಾಗಿ, ಹೆತ್ತವರು ಖುಷಿ ಪಡುವಂತೆ ಬೆಳೆದು ಜನ್ಮ ಸಾರ್ಥಕ ಪಡಿಸಿಕೊಳ್ಳಬೇಕು.

2ನೇ ಪುಟಕ್ಕೆ ಮುಂದುವರಿಯುವುದು

# ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರ ಅನಾವರಣ

ಘನತೆವೆತ್ತ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್‌ರವರು 1922ರಲ್ಲಿ ನಮ್ಮ ಹಿರಿಯರ ಮನವಿಯನ್ನು ಆಲಿಸಿ, ಇಂದಿಗೆ 100 ವರ್ಷಗಳ ಹಿಂದೆಯೇ ವೈಶ್ಯ ಹಾಸ್ಟೆಲ್ ನಿರ್ಮಾಣಕ್ಕಾಗಿ ಶೇಷಾದ್ರಿ ರಸ್ತೆ, ಬೆಂಗಳೂರು–09 ರಲ್ಲಿ 52000 ಚದುರ ಅಡಿಗಳ ವಿಶಾಲ ನಿವೇಶನ ಹಾಗೂ ರೂ. 10,000/– ಗಳ ನಗದು ನೀಡಿ ನಮ್ಮ ಸಮಾಜದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದರು. 1922ರಲ್ಲಿ ತಲೆ ಎತ್ತಿದ್ದ ವೈಶ್ಯ ಹಾಸ್ಟೆಲ್ ಇಂದಿಗೂ ಪ್ರತಿ ವರ್ಷ 120 ವಿದ್ಯಾರ್ಥಿಗಳ ಶಿಕ್ಷಣಕ್ಕೆ ಆಸರೆಯಾಗಿದೆ. 100 ವರ್ಷಗಳ ಹಿಂದೆ ನಮಗೆ ನೀಡಿದ್ದ ಭಾಗದಲ್ಲಿ ನಿರ್ಮಾಣವಾಗಿರುವ ವಾಣಿಜ್ಯ ಕಟ್ಟಡವೇ ಇಂದು ಮಹಾಸಭೆಯ ಆರ್ಥಿಕತೆಗೆ ಬೃಹತ್ ಶಕ್ತಿಯಾಗಿದೆ, ಕಾಮಧೇನುವಾಗಿದೆ.

ಅಂದಿನ ದಿನಮಾನಗಳಲ್ಲಿಯೇ ಸ್ಥಳವನ್ನು, ಹಣವನ್ನೂ ನೀಡಿ ನಮ್ಮ ಇಷ್ಟಾರ್ಥಗಳನ್ನು ಪೂರೈಸಿದ ರಾಜರ್ಷಿ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ಭಾವಚಿತ್ರವನ್ನು ಮಹಾಸಭೆಯ ಆವರಣದಲ್ಲಿ ಅನಾವಣರಣ ಮಾಡುವ ಮೂಲಕ ನಮ್ಮ ಸಮಾಜದ ಗೌರವ ಪೂರ್ಣ ನಮನಗಳನ್ನು ಸಲ್ಲಿಸುತ್ತಾ, ಪ್ರತಿಯೊಂದು ಪೀಳಿಗೆಯೂ ಪೂಜ್ಯರ ಸೇವೆಯನ್ನು ಅರಿಯಬೇಕೆಂಬ ನಮ್ಮ ಅಪೇಕ್ಷೆಯಿಂದ ದಿನಾಂಕ 5–6–2022ರ ಭಾನುವಾರ ಅಂದರೆ ಅವರ 138ನೇ ಜನ್ಮದಿನದ ಶುಭ ಮುಹೂರ್ತದಲ್ಲಿ ಕರ್ನಾಟಕ ವಿಧಾನ ಪರಿಷತ್ ಮಾಜಿ ಸಭಾಪತಿಗಳಾದ ರಾಜಕೀಯ ಕ್ಷೇತ್ರ ಭೀಷ್ಮ ಶ್ರೀ ಡಿ ಹೆಚ್ ಶಂಕರಮೂರ್ತಿಯವರು ಮಹಾರಾಜರ ಭಾವಚಿತ್ರವನ್ನು ಅನಾವರಣ ಮಾಡಿ ಪುಷ್ಪನಮನವನ್ನು ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾಸಭೆಯ ಸಂಪೂರ್ಣ ಕಾರ್ಯಕಾರಿ ಸಮಿತಿ ಸದಸ್ಯರು ಕುಟುಂಬ ಸದಸ್ಯರೊಡನೆ ಹಾಜರಾಗಿದ್ದು ವಿಶೇಷವಾಗಿತ್ತು.





ಆರ್ ಪಿ ರವಿಶಂಕರ್
ಅಧ್ಯಕ್ಷರು



ಶ್ರೀ ಡಿ ಹೆಚ್ ಶಂಕರಮೂರ್ತಿ
ಉದ್ಘಾಟಕರು

## ಅಧ್ಯಕ್ಷರ ನುಡಿ

ಮೊದಲನೇ ಪುಟದಿಂದ

ಒಂದು ಕಾಲದಲ್ಲಿ ಮಂತ್ರಗಳು ಕೆಲಸ ಮಾಡ್ತಾ ಇದ್ದವು, ನಂತರ ಯಂತ್ರಗಳು ಕೆಲಸ ಮಾಡಲು ಪ್ರಾರಂಬಿಸಿದವು. ಈಗ ಕೇವಲ ಷಡ್ಯಂತರಗಳು ಕೆಲಸ ಮಾಡ್ತಿವೆ. ಆದುದರಿಂದ ನಮ್ಮ ಬದುಕಿಗೆ ನಾವೇ ರೂಪ ನೀಡಬೇಕು. ಅಂದ, ಚಂದ, ಬಡತನ, ಶ್ರೀಮಂತಿಕೆ, ತಪ್ಪು, ಒಪ್ಪು, ಎಲ್ಲವೂ ಬರೀ ನೆಪವಷ್ಟೇ. .. ಯಾರ ಮನಸ್ಸಿನಲ್ಲಿ ನಾವು ಮುಖ್ಯವೋ, ಯಾರ ಮನಸ್ಸಿನಲ್ಲಿ ನಮಗಾಗಿ ಪ್ರೀತಿ ಮತ್ತು ಸಮಯವಿದೆಯೋ ಅವರೇ ನಮ್ಮ ಆತ್ಮೀಯರು,. . ಬದಲಾಗುವ ಈ ಕಾಲಚಕ್ರದಲ್ಲಿ, ಯಾವತ್ತೂ ಬದಲಾಗದೇ, ಯಾವತ್ತೂ ಮರೆಯದೆ, ಅಹಂಕಾರ ಪಡದೆ, ಜೊತೆಯಾಗಿ ನಿಂತು, ಕಷ್ಟ–ಸುಖದಲ್ಲಿ ಒಂದೇ ರೀತಿಯಾಗಿ ಸ್ಪೂರ್ತಿ ತುಂಬುವ ಸಂಬಂದಗಳೇ ನಮ್ಮ ಬದುಕಿನ ದೊಡ್ಡ ಅಸ್ತ್ರ..ನಮ್ಮೊಡನೆ ಮಾತನಾಡಲು ತವಕಿಸುವವರಿಗೆ ಗೌರವ ನೀಡೋಣ, ನಮ್ಮೊಡನೆ ತಮ್ಮ ಸಮಸ್ಯೆಗಳ ಬಿಚ್ಚಿಡುವವರಿಗೆ ಪರಿಹಾರವಾಗೋಣ, ನಮ್ಮೊಡನೆ ತಮ್ಮ ದು:ಖವ ಹೇಳಿಕೊಳ್ಳುವವರಿಗೆ ಸಾಂತ್ವಾನ ನೀಡೋಣ, ನಮ್ಮೊಡನೆ ತಮ್ಮ ಸುಖವ ಹಂಚಿಕೊಳ್ಳುವವರಿಗೆ ಸಂತಸದ ಕಿವಿಯಾಗೋಣ, ನಮ್ಮೊಡನೆ ಅಹಂಕಾರ ಭಾವ ತಳೆದವರನ್ನು ನಿರ್ಲಕ್ಷಿಸೋಣ, ನಮ್ಮೊಡನೆ ದ್ವೇಷ ಭಾವ ಹೊಂದಿರುವವರನ್ನು ದೂರವಿರಿಸೋಣ.

ಬಂಧುಗಳೇ, ಕನಸು ಮುರಿದರೆ ಮತ್ತೊಂದು ಕನಸು ಕಾಣಬಹುದು ಆದರೆ, ಮನಸ್ಸು ಮುರಿದರೆ ಮತ್ತೊಂದು ಮನಸ್ಸನ್ನು ತರುವುದಕ್ಕೆ ಆಗುವುದಿಲ್ಲ. ನಿಮಗೆ ಯಾರ ಮೇಲಾದರೂ ಅನುಮಾನವಿದ್ದರೆ ಕೂಡಲೇ ಪರಿಹರಿಸಿಕೊಳ್ಳಿ, ಇಲ್ಲವೆ ಅನುಮಾನವೆಂಬ ಕ್ಯಾನ್ಸರ್ ರೋಗವನ್ನು ಬೇರು ಸಮೇತ ಕಿತ್ತು ಒಗೆಯಿರಿ. ಬದುಕಿ ಬೆಳಗಬೇಕಾದ ಜೀವನ ಅನುಮಾನವೆಂಬ ರಕ್ಕಸನ ಪಾಲಾಗದಿರಲಿ. ಕತ್ತಲಿನಿಂದ ಬೆಳಕಿನೆಡೆಗೆ ಹೆಜ್ಜೆಹಾಕಿ ನಿಮ್ಮ ಆದರ್ಶಗಳನ್ನು ಪೋಷಿಸಿ, ಬೆಳೆಸಿ ಲೋಕಕ್ಕೆ ಆದರ್ಶರಾಗಿ ಬಾಳಿರೆಂದು ಪ್ರಾರ್ಥಿಸುವ

ಆರ್ ಪಿ ರವಿಶಂಕರ್
ಅಧ್ಯಕ್ಷರು

# ನೂತನ ಕಾರ್ಯಕಾರಿ ಸಮಿತಿ–ಪ್ರಮಾಣ ವಚನ ಸಮಾರಂಭ

## ದಿನಾಂಕ: 5–6–2022

**ಮೇ 1 2022ರ** ಭಾನುವಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ 2022–2027ರ ಅವಧಿಗೆ ಚುನಾವಣೆಗಳು ನಡೆದು, 23 ಜಿಲ್ಲೆಗಳ ಪೈಕಿ 20 ಜಿಲ್ಲೆಗಳಲ್ಲಿ ಅವಿರೋಧ ಆಯ್ಕೆ. ಬೆಂಗಳೂರು ನಗರದ 18 ಸದಸ್ಯರ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗೆ ತಲಾ ಇಬ್ಬರು ಸದಸ್ಯರಿಗೆ ಚುನಾವಣೆಗಳು ನಡೆದು ದಿನಾಂಕ: 1–5–2022ರ ರಾತ್ರಿಯೇ ಚುನಾವಣಾ ಅಧಿಕಾರಿಗಳು 23 ಜಿಲ್ಲೆಗಳ ಜಿಲ್ಲಾವಾರು ಫಲಿತಾಂಶವನ್ನು ನೀಡಿದರು.

ನಾನಾ ಕಾರಣಗಳಿಂದ ಅನಿವಾರ್ಯವಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವನ್ನು ಸುಮಾರು 15 ದಿನಗಳ ತಡವಾಗಿ ನಡೆಸಲಾಯಿತು, ಅಂದರೆ ದಿನಾಂಕ: 5–6–2022ರ ಭಾನುವಾರ ಬೆಳಗ್ಗೆ 8.30 ರಿಂದ ಪ್ರಾರಂಭವಾದ ಕಾರ್ಯಕ್ರಮಗಳು ಸಂಜೆ 5.30 ಕ್ಕೆ ಮುಕ್ತಾಯವಾಯಿತು.

## ಕಾರ್ಯಕ್ರಮಗಳು

ಬೆಂಗಳೂರು ನಗರದ ಶೇಷಾದ್ರಿ ರಸ್ತೆಯಲ್ಲಿರುವ 52000 ಸಾವಿರ ಚದುರ ಅಡಿಗಳ ಜಾಗವನ್ನು ಮತ್ತು ಅಲ್ಲಿ ವೈಶ್ಯ ಹಾಸ್ಟೆಲ್ ನಿರ್ಮಾಣಕ್ಕೆಂದು 100 ವರ್ಷಗಳ ಹಿಂದೆಯೇ ರೂ.10,000/– ಗಳ ನಗದು ಮೊತ್ತವನ್ನು ಮಹಾಸಭೆಗೆ ನೀಡಿ ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸಮಾಜ ಬೆಳೆಯಲು ಸಹಕಾರ ನೀಡಿದ ಮಹಾಮಹಿಮರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ವರ್ಣರಂಜಿತ ಭಾವಚಿತ್ರವನ್ನು ಮಹಾಸಭೆಯ ಪ್ರವೇಶ ದ್ವಾರದಲ್ಲಿ ಅಳವಡಿಸಿದ್ದು, ನಮ್ಮ ರಾಜ್ಯದ ರಾಜಕೀಯ ಕ್ಷೇತ್ರದ ಮುತ್ಸದಿ, ಶ್ರೇಷ್ಠ ರಾಜಕೀಯ ಪಟು, ಮಾಜಿ ಸಚಿವರು ಹಾಗೂ ವಿಧಾನ ಪರಿಷತ್‌ನ ಮಾಜಿ ಸಭಾಪತಿಗಳಾದ ಶ್ರೀ ಡಿ ಹೆಚ್ ಶಂಕರಮೂರ್ತಿಯವರ ಅಮೃತ ಹಸ್ತದಿಂದ ನೂರಾರು ಕುಲಭಾಂದವರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಅನಾವರಣ ಮಾಡಲಾಯಿತು.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರ ಅನಾವರಣ
ಶ್ರೀ ಡಿ ಹೆಚ್ ಶಂಕರಮೂರ್ತಿರವರಿಂದ

ಸುಂದರ ಪುಷ್ಪ ಕಮಾನುಗಳಿಂದ ಸಿಂಗಾರವಾಗಿದ್ದ ಮಹಾಸಭೆ ಕಛೇರಿ ಆವರಣದಲ್ಲಿ ನೂತನ ಸದಸ್ಯರು ಕುಟುಂಬ ವರ್ಗದವರೊಂದಿಗೆ ಸಂಭ್ರಮದಿಂದ ಓಡಾಡಿ ಫೋಟೋಗಳನ್ನು ತೆಗೆದು ಸಂಭ್ರಮಿಸುತ್ತಿದ್ದು ಕಣ್ಣಿಗೆ ಹಬ್ಬವನ್ನುಂಟು ಮಾಡಿತ್ತು. ಸುಮಾರು 10.00 ಘಂಟೆಗೆ ವಾದ್ಯಗಳ ಸುನಾದದೊಂದಿಗೆ ಸುಮಂಗಲಿಯರು ಆರತಿ ಬೆಳಗಿ, ತಿಲಕವನ್ನಿಟ್ಟು ಸಭಾಂಗಣಕ್ಕೆ ಸದಸ್ಯರನ್ನು ಸ್ವಾಗತಿಸಿದರು.



2022–27 ಅವಧಿಯ ಕಾರ್ಯಕಾರಿ ಸಮಿತಿ ಸದಸ್ಯರು



ಪ್ರಮಾಣ ವಚನ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಸದಸ್ಯರನ್ನು ಸುಮಂಗಲಿಯರು ಸ್ವಾಗತಿಸುತ್ತಿರುವುದು



ನಿರ್ದೇಶಕರುಗಳ ಕುಟುಂಬ ವರ್ಗ

ನಿಗಧಿತ ಸಮಯಕ್ಕೆ ಸರಿಯಾಗಿ ಸಭೆಯ ಕಾರ್ಯಕಲಾಪಗಳಿಗೆ ಚಾಲನೆ. ನಾಡಿನ ಶ್ರೇಷ್ಠ ಸಂತರಲ್ಲಿ ಒಬ್ಬರಾಗಿ ಸಾವಿರ ಸಾವಿರ ಯುವ ಜನತೆಗೆ ದೇಶ ವಿದೇಶಗಳಲ್ಲಿ ಮಾರ್ಗದರ್ಶನ ನೀಡಿ ದೇಶದ ಸಾಂಸ್ಕೃತಿಕ, ಧಾರ್ಮಿಕ ಮೌಲ್ಯಗಳನ್ನು ವಿಶ್ವಕ್ಕೆ ಪರಿಚಯ ಮಾಡಿ ಕೊಟ್ಟಿರುವ ರಾಮಕೃಷ್ಣ ಆಶ್ರಮದ ಪೂಜ್ಯ ಶ್ರೀ ನಿರ್ಭಯಾನಂದ ಸರಸ್ವತಿಯವರನ್ನು ವೇದಿಕೆಗೆ ಆಹ್ವಾನಿಸಿ **"ಸಮಾಜ ಸೇವೆಯಲ್ಲಿ ನಮ್ಮ ಪಾತ್ರ"** ಎಂಬುದರ ಬಗ್ಗೆ ಪ್ರವಚನವನ್ನು ಏರ್ಪಡಿಸಲಾಗಿತ್ತು. ಶ್ರೀಗಳ ಸಿರಿ ಕಂಠದಿಂದ ಮೂಡಿ ಬಂದ ನುಡಿಮುತ್ತುಗಳು ನಮ್ಮ ಸದಸ್ಯರ ಸ್ಫೂರ್ತಿ ಚೈತನ್ಯಗಳನ್ನು ಇಮ್ಮಡಿಗೊಳಿಸಿದವು. ಸಮಯ 11.30ಕ್ಕೆ ಸರಿಯಾಗಿ **ಶ್ರೀ ನಿರ್ಭಯಾನಂದ ಸರಸ್ವತಿಯವರು** ತಮ್ಮ ಮಾತಿಗೆ ವಿರಾಮ ಹೇಳಿ, ಮಹಾಸಭೆಯ ಗೌರವವನ್ನು ಸ್ವೀಕರಿಸಿ, ನೂತನವಾಗಿ 3ನೇ ಬಾರಿಗೆ ಅಧ್ಯಕ್ಷ ಪದವಿಯನ್ನು ಸ್ವೀಕರಿಸುತ್ತಿರುವ ನಮ್ಮ ನೆಚ್ಚಿನ ಅಧ್ಯಕ್ಷರಾದ ಶ್ರೀ ರಾ ಪ ರವಿಶಂಕರ್‌ರವರಿಗೆ ಪುಷ್ಪಗುಚ್ಛವನ್ನು ನೀಡಿ ಶುಭ ಹಾರೈಸಿದರು.



ಪೂಜ್ಯ ಶ್ರೀ ಶ್ರೀ ಶ್ರೀ ನಿರ್ಭಯಾನಂದ ಗುರೂಜಿರವರೊಂದಿಗೆ ಅದ್ಯಕ್ಷರು

## ಪ್ರಮಾಣ ವಚನ ಸಮಾರಂಭ

2022–2027ರ ಅವಧಿಗೆ ಚುನಾಯಿತರಾಗಿರುವ 82 ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾಗೂ ಸತತ 3ನೇ ಅವಧಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಶ್ರೀ ರಾ ಪ ರವಿಶಂಕರ್‌ರವರಿಗೆ ಕರ್ನಾಟಕ ವಿಧಾನ ಪರಿಷತ್‌ನ ಮಾಜಿ ಸಭಾಪತಿಗಳಾದ ಶ್ರೀ ಡಿ ಹೆಚ್ ಶಂಕರಮೂರ್ತಿಯವರು ಪ್ರಮಾಣ ವಚನ ನೀಡಿ ಶುಭ ಹಾರೈಸಿದರು. ಅಧ್ಯಕ್ಷರಿಂದ ಪದಾಧಿಕಾರಿಗಳಾಗಿ ನೇಮಕವಾದ ಶ್ರೀ ಕುಂಟ್ನಾಳ ವೆಂಕಟೇಶ್–ಹಿರಿಯ ಉಪಾಧ್ಯಕ್ಷರು, ಶ್ರೀ ಕೆ ಆರ್ ಕೃಷ್ಣ, ಶ್ರೀ ಹೆಚ್ ಜಿ ಹನುಮಂತಯ್ಯ–ಪ್ರಧಾನ ಕಾರ್ಯದರ್ಶಿಗಳು. ಶ್ರೀ ಎ ಆರ್ ರವಿಕುಮಾರ್–ಸಂಘಟನಾ ಕಾರ್ಯದರ್ಶಿ, ಶ್ರೀ ಎನ್ ಎಸ್ ಶ್ರೀನಿವಾಸಮೂರ್ತಿ–ಕೋಶಾಧ್ಯಕ್ಷರಾಗಿ, ಶ್ರೀ ಎಸ್ ಕೆ ಶೇಷಾಚಲ, ಶ್ರೀ ಆರ್ ಜಿ ಶ್ರೀನಿವಾಸಮೂರ್ತಿ ಕ್ರಮವಾಗಿ ಶಿಕ್ಷಣ ಹಾಗೂ ಸಹಕಾರ ಬ್ಯಾಂಕುಗಳ ಮಹಾಮಂಡಲದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು.




ಶ್ರೀ ಡಿ ಹೆಚ್ ಶಂಕರಮೂರ್ತಿಯವರು ನೂತಾನ ಅಧ್ಯಕ್ಷರಿಗೆ ಪ್ರಮಾಣ ವಚನ ನೀಡಿದ ಸುಸಂದರ್ಭ ಪೂಜ್ಯ ಶ್ರೀ ಸಚ್ಚಿದಾನಂದ ಸರಸ್ವತಿಯವರ ದಿವ್ಯ ಸಾನಿಧ್ಯ.



ಶಿಕ್ಷಣ ಕ್ಷೇತ್ರದ ಅಧ್ಯಕ್ಷರಾಗಿ ಶ್ರೀ ಎಸ್ ಕೆ ಶೇಷಾಚಲ ಮತ್ತು ಸಹಕಾರ ಕ್ಷೇತ್ರದ ಅಧ್ಯಕ್ಷರಾಗಿ ಶ್ರೀ ಆರ್ ಜಿ ಶ್ರೀನಿವಾಸ ಮೂರ್ತಿರವರು ಪ್ರಮಾಣ ವಚನ ಸ್ವೀಕರಿಸಿದರು.




ಪದಾಧಿಕಾರಿಗಳಿಂದ ಪ್ರಮಾಣ ವಚನ ಸ್ವೀಕಾರ.

ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ವಿರಾಜಮಾನರಾಗಿದ್ದ ಶ್ರೀ ವಾಸವೀ ಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿಯವರು ಮಾತನಾಡಿ ಪ್ರತಿಯೊಬ್ಬ ಸದಸ್ಯರು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಕಾರ್ಯನಿರ್ವಹಿಸಿ ಆರ್ಯವೈಶ್ಯ ಸಮಾಜದ ಘನತೆ ಗೌರವಗಳನ್ನು ಎತ್ತಿ ಹಿಡಿಯಬೇಕು. ಮಹಾಸಭೆ ಮೂಲಕ ಮತ್ತಷ್ಟು ಸೇವಾ ಕಾರ್ಯಕ್ರಮಗಳು ನಡೆದು ನೂರಾರು ಕುಟುಂಬಗಳ ಏಳಿಗೆಗೆ ಸಹಕಾರಿಯಾಗಬೇಕೆಂದು ಕಿವಿಮಾತು ಹೇಳಿ, ಆರ್ ಪಿ ರವಿಶಂಕರ್ ಹಾಗೂ ಅವರ ತಂಡಕ್ಕೆ ಶುಭ ಹಾರೈಸಿದರು.

# ಮಹಾಸಭೆ ಇತಿಹಾಸ ಪರಿಚಯ



ವೈಶ್ಯ ಹಾಸ್ಟೆಲ್ 1928



ವೈಶ್ಯ ಹಾಸ್ಟೆಲ್ 1996



ವೈಶ್ಯ ಹಾಸ್ಟೆಲ್ 2016

2022–27ರ ಅವಧಿಯ ಕಾರ್ಯಕಾರಿ ಸಮಿತಿಯಲ್ಲಿ ಶೇ.50ಕ್ಕೂ ಮೀರಿ ಹೊಸ ಸದಸ್ಯರಿದ್ದು ಅವರೆಲ್ಲರಿಗೂ ಮಹಾಸಭೆ ನಡೆದು ಬಂದ ದಾರಿ ಬಗ್ಗೆ ಅಂದರೆ ಮಹಾಸಭೆ **ಅಂದು–ಇಂದು–ಮುಂದು** ಎಂಬ ವಿಷಯದ ಬಗ್ಗೆ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಮಧ್ಯಾಹ್ನ 12.30 ರಿಂದ ಸುಮಾರು 2.00 ಘಂಟೆವರೆವಿಗೂ ನಿರಂತರವಾಗಿ ಮಾಹಿತಿಗಳ ಮಳೆ ಸುರಿಸಿದರು. ಸಮಾಜ ಸೇವೆಗೆ ಆರಿಸಿ ಬಂದಿರುವ ನಮ್ಮ ಜವಬ್ದಾರಿಗಳ ಬಗ್ಗೆ ಒತ್ತಿ ಒತ್ತಿ ತಿಳಿಸಿದ್ದಲ್ಲದೆ, ಮುಂದಿನ ಐದು ವರ್ಷಗಳಲ್ಲಿ ಮಾಡುವ ಕೆಲಸಗಳು ಮೊದಲು ನಮಗೆ ತೃಪ್ತಿ ನೀಡಬೇಕು, ನಂತರ ನಮ್ಮ ಸಮುದಾಯಕ್ಕೆ ಖುಷಿ ನೀಡಬೇಕು. ಸಮಾಜದ ಪ್ರತಿಯೊಂದು ರಂಗದಲ್ಲಿಯೂ ನಾವು ನಿರಂತರವಾಗಿ ಕಾರ್ಯನಿರ್ವಹಿಸಿ ಮಹಾಸಭೆ ಮೂಲಕ ಸಮಾಜದ ಬಂಧುಗಳ ಸರ್ವಾಂಗೀಣ ಅಭಿವೃದ್ಧಿ ಆಗಬೇಕೆಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಮಹಾಸಭೆ ಬೆಳೆದು ಬಂದಿರುವ ಬಗೆ 7 ರಿಂದ 8 ನಿಮಿಷಗಳ ಪ್ರಾತ್ಯಕ್ಷಿಕೆಯನ್ನು ಸಹ ಪರದೆ ಮೇಲೆ ತೋರಿಸುವ ಮೂಲಕ ನಾವು ಮತ್ತು ನಮ್ಮ ಮಹಾಸಭೆಯನ್ನು ವಿಸ್ತರಿಸಿದ್ದೇವೆ ಎಂಬುದನ್ನು ಮನದಟ್ಟು ಮಾಡಿ ಕೊಡುವ ಪ್ರಯತ್ನದಲ್ಲಿ 20 ನಿಮಿಷಗಳ ಎರಡನೇ ಕಾರ್ಯಗಾರ ಅವಧಿ ಸಮಾಧಾನಕರವಾಗಿ ಮುಗಿದು ನೆರೆದಿದ್ದ ಎಲ್ಲಾ ಸದಸ್ಯರ ಮೆಚ್ಚುಗೆಗೆ ಪಾತ್ರವಾಗಿದ್ದು ವಿಶೇಷವಾಗಿತ್ತು.

ಮಧ್ಯಾಹ್ನ 2 ರಿಂದ 3 ಘಂಟೆವರೆವಿಗೂ ಊಟದ ವಿರಾಮ, ನಂತರ ಸದಸ್ಯರ ಕುಟುಂಬ ವರ್ಗದವರಿಗೆ ವಿಶೇಷ ಕ್ರೀಡೆಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಪ್ರಥಮ ಸಭೆ ಕಾರ್ಯ ಕಲಾಪಗಳ ಬಗ್ಗೆ ತಿಳಿಸಿ ಬೆಳಗಿನ ಸಭೆ ಕಾರ್ಯಕಲಾಪಗಳನ್ನು ಬರಕಾಸ್ತುಗೊಳಿಸಲಾಯಿತು.

---

## ಪ್ರಥಮ ಕಾರ್ಯಕಾರಿ ಸಭೆ

ಮಧ್ಯಾಹ್ನ ಊಟದ ನಂತರ ಸುಮಾರು 2.50 ಕ್ಕೆ ಕಾರ್ಯಕಾರಿ ಸಮಿತಿ ಸದಸ್ಯರು ಸಭಾಂಗಣದಲ್ಲಿ ಹಸನ್ಮುಖರಾಗಿ ಆಸೀನರಾದರು. ಶ್ರೀಮತಿ ತಾರಾಸುಬ್ರಮಣ್ಯರವರ ಪ್ರಾರ್ಥನಾ ಗೀತೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು. ಸಾಮಾನ್ಯ ವಿಷಯಗಳ ಮಂಡನೆ, ಚರ್ಚೆ, ಅಂಗೀಕಾರದ ನಂತರ ಮಹಾಸಭೆ ಮುಂದಿನ ಐದು ವರ್ಷಗಳ ಯೋಜನೆಗಳು, ಅದರ ಅವಶ್ಯಕತೆ, ಅನುಷ್ಠಾನದಲ್ಲಿ ಸದಸ್ಯರ ಪಾತ್ರದ ಬಗ್ಗೆ ಅಧ್ಯಕ್ಷರಾದ ಶ್ರೀ ರಾ ಪ ರವಿಶಂಕರ್‌ರವರು ಸರಿ ಸುಮಾರು 3 ಘಂಟೆಗಳ ಕಾಲ ನಿರರ್ಗಳವಾಗಿ ಮಾತನಾಡಿ ಮಹಾಸಭೆ ಮುನ್ನೊಟದ ಬಗ್ಗೆ ಸದಸ್ಯರ ಮನಮುಟ್ಟುವಂತೆ ವಿಷಯಗಳನ್ನು ಮಂಡಿಸಿದರು.

ಇದೇ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರು ನಿರ್ವಹಿಸಲೇಬೇಕಾದ ಜವಬ್ದಾರಿಗಳನ್ನು ತಿಳಿಸಿ ಒಂದು ವೇಳೆ ತಮ್ಮ ತಮ್ಮ ಕಾರ್ಯನಿರ್ವಯಿಸದೆ ಇರುವ ನಿರ್ದೇಶಕರು ತಮ್ಮ ಸ್ಥಾನಗಳನ್ನು ಕಳೆದುಕೊಳ್ಳಬೇಕಾದ ಸ್ಥಿತಿ ಬರುತ್ತದೆಂಬ ಎಚ್ಚರಿಕೆಯ ಸಂದೇಶವನ್ನು ಸಹ ಸ್ಪಷ್ಟವಾಗಿ ನೀಡಿದರು.

## 2022–27ರ ಮಹಾಸಭಾ ಮುಂದಿನ ಯೋಜನೆಗಳು

**▶ ವಿದ್ಯಾವಾಹಿನಿ: ವಸತಿ ಶಾಲೆ–ಡಾಬಸ್ ಪೇಟೆ (ಅಂದಾಜು ರೂ. 35 ಕೋಟಿಗಳ ವೆಚ್ಚ) ▶ಆರ್ಯವೈಶ್ಯ ಕೋ–ಆಪರೇಟಿವ್ ಬ್ಯಾಂಕ್ ಹಾಗೂ ಸೊಸೈಟಿ ಫೆಡರೇಷನ್ ಮೂಲಕ ಸಹಕಾರ ಕ್ಷೇತ್ರದ ಅಭಿವೃದ್ಧಿ. ▶ವಾಸವಿ ಟೆಂಪಲ್ ಫೆಡರೇಷನ್–ರಾಜ್ಯದ 265 ವಾಸವಿ ದೇವಾಲಯಗಳಿಗೆ ಮಾಗದರ್ಶನ ಹಾಗೂ ಏಕ ರೂಪ ಪೂಜಾ ಪದ್ಧತಿಗಳು. ▶ಸ್ಕಿಲ್ ಡೆವಲೆಪ್‌ಮೆಂಟ್ಸ್–ಯುವಜನತೆಯನ್ನು ವಾಣಿಜ್ಯೋದ್ಯಮಗಳತ್ತ ಕರೆತರುವ ಪ್ರಯತ್ನ. ▶ಸ್ಮಾಲ್ ಕಮರ್ಷಿಯಲ್ ಫೆಡರೇಷನ್. ▶ಸೋಮಘಟ್ಟ ಆಸ್ತಿ – ಬೃಹತ್ ಗೋಶಾಲೆ, ಕೃಷಿ ಕಾಲೇಜು ಸ್ಥಾಪನೆ. ▶ಮೈಸೂರು ಪ್ರೊಜೆಕ್ಟ್– ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹಾಸ್ಟೆಲ್, ಅತಿಥಿ ಗೃಹ, ಅಕಾಡೆಮಿ. ▶ ವಾಸವಿ ಮಾತಾ ವೆಬ್ ಪೋರ್ಟಲ್ – ರಾಜ್ಯದ 250 ವಾಸವಿ ದೇವಾಲಯಗಳ ಸಂಗಮ. ▶ವೈಶ್ಯ ಗ್ಲೋಬಲ್ ಬ್ಯುಸಿನೆಸ್ ಮೀಟ್– ಡಿಸೆಂಬರ್ 2023. ▶ಆಜೀವ ಸದಸ್ಯತ್ವದ ಪಟ್ಟಿ ಪರಿಷ್ಕರಣೆ. ▶ಸ್ವಹಿಂದು ಸಂಘಟನೆ– ಸಣ್ಣ ಸಣ್ಣ ಸಮುದಾಯಗಳನ್ನು ಸಂಘಟಿಸಿ ಸರ್ಕಾರದ ಸವಲತ್ತುಗಳಿಗೆ ಆಗ್ರಹಿಸುವುದು.**

ಮೇಲೆ ತಿಳಿಸಿರುವ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿಗಳನ್ನು ಸದಸ್ಯರಿಗೆ ನೀಡಿ, ಅನುಷ್ಠಾನಗೊಳಿಸಲು ಸದಸ್ಯರ ಸರ್ವಾನುಮತದ ಅಂಗೀಕಾರವನ್ನು ನೀಡಿ ಯೋಜನೆಗಳ ಬಗ್ಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

ಯೋಜನೆಗಳ ಅನುಷ್ಠಾನದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಜವಬ್ದಾರಿಗಳು–ಕರ್ತವ್ಯಗಳ ಬಗ್ಗೆ ಪೂರ್ಣವಾದ ಮಾಹಿತಿಗಳನ್ನು ಅಧ್ಯಕ್ಷರು ನೀಡಿದರು. ಒಂದು ವೇಳೆ ತಮ್ಮ ಕೆಲಸದಲ್ಲಿ ವಿಮುಖರಾದ ಸದಸ್ಯರಿಗೆ ಆಗಬಹುದಾದ ನಷ್ಟದ ಬಗ್ಗೆ ತಿಳಿಸಿದ ನಂತರ ಸಭೆಯು ಅಧ್ಯಕ್ಷರು ತಿಳಿಸಿರುವ ಸದಸ್ಯರ ಜವಬ್ದಾರಿ, ಕರ್ತವ್ಯಗಳು ಮತ್ತು ಕಾರ್ಯನಿರ್ವಹಣೆಯಲ್ಲಿ ವಿಮುಖರಾದ ಸದಸ್ಯರಿಗೆ ಆಗಬಹುದಾದ ತೊಂದರೆಗಳ ಬಗ್ಗೆ ತಿಳಿದು ಕೊಂಡು ತಮ್ಮ ಸರ್ವಾನುಮತದ ಅಂಗೀಕಾರ ನೀಡಿದರು.

## ಕಾರ್ಯ ಸಾಧನೆಗಾಗಿ ನಿರ್ದೇಶಕರ ಕರ್ತವ್ಯ

1. ನಾವು ಮಹಾಸಭೆ ಬೆಳೆಸಲು ಇಲ್ಲಿಗೆ ಸ್ವ ಇಚ್ಛೆಯಿಂದ ಬಂದಿದ್ದೇವೆ, 2. ನಾವು ಸಮಾಜ ನಿರ್ಮಾಣಕ್ಕಾಗಿ ನಿಸ್ವಾರ್ಥವಾಗಿ ಬಂದಿದ್ದೇವೆ., ಪರಸ್ಪರ ವಿಶ್ವಾಸದಿಂದ ಕಾರ್ಯಸಾಧಿಸಬೇಕು. 3. ಅಶಕ್ತರ, ಅಸಹಾಯಕರ, ಅಬಲರ ಶ್ರೇಯೋಭಿವೃದ್ಧಿಗಾಗಿ ಕಾಯಾ–ವಾಚಾ–ಮನಸಾ ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತೇವೆ. 4. ಮಹಾಸಭೆಯನ್ನು ಸೇವಾ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಜನ ಮನಕ್ಕೆ ಮುಟ್ಟಿಸುತ್ತೇವೆ. 5. ಪ್ರಾಂತೀಯ ಭಾವನೆಗಳಿಂದ ಹೊರಬಂದು, ಸ್ವಾರ್ಥದಿಂದ ಹೊರಬಂದು, ಪ್ರತಿಯೊಬ್ಬ ಆರ್ಯವೈಶ್ಯ ಬಂಧುಗಳನ್ನು ಪರಸ್ಪರ ಪ್ರೀತಿ ವಿಶ್ವಾಸದಿಂದ ಸಮರ್ಪಣಾ ಭಾವದಿಂದ ಮಹಾಸಭೆ ಮೂಲಕ ಸಮಾಜಕ್ಕೆ ಅರ್ಥಪೂರ್ಣವಾದ, ಪರಿಣಾಮಕಾರಿಯಾದ ಸೇವೆಯನ್ನು ತನು–ಮನ–ಧನಗಳಿಂದ ಪಾರದರ್ಶಕವಾಗಿ ನೀಡುವ ಮೂಲಕ ಆದರ್ಶಗಳನ್ನು ಮೆರೆದು ಸಮಾಜದ ಋಣವನ್ನು ತೀರಿಸುತ್ತೇವೆ

## ನಿರ್ದೇಶಕರ ಜವಾಬ್ದಾರಿ...

1. ಮಹಾಸಭೆಯ ಪ್ರತಿ ಸಭೆಗಳಿಗೆ ತಪ್ಪದೆ ಆಗಮಿಸಿ ಸಕ್ರಿಯರಾಗಿರುತ್ತೇವೆ. 2. ಮಹಾಸಬೆ ಕಾರ್ಯಕ್ರಮ /ಯೋಜನೆಗಳನ್ನು ನಮ್ಮ ಊರು ತಾಲ್ಲೋಕು/ಜಿಲ್ಲೆಗಳಲ್ಲಿರುವ ಕುಟುಂಬದವರಿಗೆ ತಪ್ಪದೆ ತಲುಪಿಸುತ್ತೇವೆ. 3. ಆರ್ಯವೈಶ್ಯ ಸಮಾಜದ ಜೀವನ ಶೈಲಿಯ ಸಂಸ್ಕಾರಗಳನ್ನು ಅಳವಡಿಸಿಕೊಂಡು ಪವಿತ್ರ ಸಸ್ಯಹಾರಿಗಳಾಗಿ ಸುರಪಾನ /ಮಧುಪಾನದಂತಹ ಅನಿಷ್ಟ ಸಂಸ್ಕಾರದಿಂದ ಮುಕ್ತರಾಗಿರುತ್ತೇವೆ. 4. ವೇದಿಕೆಗಳಲ್ಲಿ ನೀವು ಹೇಳುವುದನ್ನು ನಾವು ಪರಿಪಾಲಿಸುತ್ತೇವೆ. 5. ಪ್ರತೀ 12 ತಿಂಗಳಿಗೊಮ್ಮೆ ಮಹಾಸಭೆಯಲ್ಲಿ ನಮ್ಮ ನಮ್ಮ ಕೆಲಸ ಕಾರ್ಯಗಳ ಮೌಲ್ಯಮಾಪನ ಮಾಡೋಣ, ನಮಗೆ ಅರ್ಹತೆ ಇಲ್ಲದಿದ್ದಾಗ ನಾವಾಗಿ ರಾಜೀನಾಮೆ ನೀಡಿ, ಕೆಲಸ ಮಾಡುವವರಿಗೆ ಅವಕಾಶ ಮಾಡಿ ಕೊಡೋಣ, ಒಂದು ವೇಳೆ ರಾಜೀನಾಮೆ ತೆಗೆದು ಹಾಕುವ ಅಧಿಕಾರವನ್ನು ಇಂದಿನಿಂದಲೇ ನೀಡಿ ಸಾರ್ಥಕತೆ ಮೆರೆಯೋಣ

## ಅಭಿನಂದನೆಗಳು



ಡಾ|| ಡಿ ಹೆಚ್ ಶಂಕರಮೂರ್ತಿ

50 ವರ್ಷ ಸುಧೀರ್ಘ ರಾಜಯಕೀಯ ಜೀವನದಲ್ಲಿ ನಿಷ್ಠಾವಂತ ರಾಜಕಾರಣಿಯಾಗಿ ಪಕ್ಷಾತೀತವಾಗಿ ಸರ್ವರ ಪ್ರೀತಿ ವಿಶ್ವಾಸವನ್ನು ಗಳಿಸಿ ಉನ್ನತ ಶಿಕ್ಷಣ ಸಚಿವರಾಗಿ ಅತ್ಯಮೂಲ್ಯವಾದ ಸೇವೆಯನ್ನು ಕರ್ನಾಟಕ ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಅಮೋಘ ಕೊಡುಗೆ ನೀಡಿದ ದೈವ ಶಕ್ತಿ. ಎಂಟುವರೆ ವರ್ಷದ ಸುಧಿರ್ಘ ಕಾಲ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಮೇಲ್ಮನೆಯ ಗೌರವನ್ನು ರಾಷ್ಟ್ರ ಮಟ್ಟದಲ್ಲಿ ಮೆರೆಸಿದ ಕೀರ್ತಿಪ್ರಾಯರಾದ ಸನ್ಮಾನ್ಯ ಶ್ರೀ ಡಿ ಹೆಚ್ ಶಂಕರಮೂರ್ತಿರವರು ರಾಜ್ಯಕ್ಕೆ ನೀಡಿರುವ ಅರ್ಥಪೂರ್ಣ ಸೇವೆಯನ್ನು ಗುರುತಿಸಿ ಕುವೆಂಪು ವಿಶ್ವ ವಿದ್ಯಾಲಯ ತನ್ನ 38ನೇ ಘಟಿಕೋತ್ಸವದ ಶುಭ ಸಂದರ್ಭದಲ್ಲಿ ಘನವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರ ಅಮೃತಹಸ್ತದಿಂದ ದಿನಾಂಕ 16–6–2022ರಂದು ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿದರು.

ಗೌರವ ಡಾಕ್ಟರೇಟ್ ಪದವಿಯನ್ನು ಸ್ವೀಕರಿಸಿದ ಡಾ|| ಡಿ ಹೆಚ್ ಶಂಕರಮೂರ್ತಿರವರಿಗೆ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸುತ್ತೇವೆ

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152